ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದನ್ನು ಇಲ್ಲಿಯವರೆಗೆ ಪರಿಗಣಿಸಿಲ್ಲ. ನನ್ನ ಕ್ಷೇತ್ರದ ತಾಲ್ಲೂಕು ವರದಿ ಪಟ್ಟಿಯನ್ನು ನೋಡಿದರೆ ನಾಲ್ಕು ಗ್ರಾಮಗಳಲ್ಲಿ ಹೆಚ್ಚಿನ ದನಗಳ ಸಂಖ್ಯೆ ಇದ್ದರೂ ಕೂಡ ಈ ಕೇಂದ್ರವನ್ನು ತೆರೆದಿಲ್ಲ. ಆದ್ದರಿಂದ ಅಂಕಿಅಂಶಗಳ ಪ್ರಕಾರ ನೀವು ಮಾಡಿಲ್ಲ. ಯಾವ ಆಧಾರದ ಮೇಲೆ ನೀವು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು. ನಮ್ಮಲ್ಲಿ ಹೈನುಗಾರಿಕೆ ವೃತ್ತಿ ಪ್ರಧಾನವಾಗಿರತಕ್ಕದ್ದು. ಅಲ್ಲಿ ಸುಮಾರು 80 ಸೊಸೈಟಿಗಳು ಇವೆ. ಇನ್ನು ಹೆಚ್ಚು ಬರಲಿಕ್ಕೆ ಅವಕಾಶಗಳಿದ್ದರೂ ಸಹ, ಪಶುಚಿಕಿತ್ಸಾ ಕೇಂದ್ರಗಳಿಲ್ಲದೇ ಇರುವುದರಿಂದ ಜನರು ದನಗಳನ್ನು ಸಾಕಲು ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ಮುಂದೆ ಇದನ್ನು ಸರಿಪಡಿಸುತ್ತೀರಾ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೇ, 1990ರಿಂದ ಇಲ್ಲಿಯವರೆಗೆ ಅನೇಕ ಆಸ್ಪತ್ರೆಗಳಿಗೆ ನಾವು ಸಿಬ್ಬಂದಿಯನ್ನು ಕೊಟ್ಟಿಲ್ಲ. ಅದಕ್ಕೆ ಕಾರಣ ಹಣಕಾಸಿನ ಕೊರತೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದಕ್ಕೋಸ್ಕರವೇ 1993-94ರಲ್ಲಿ ನಮ್ಮ ಪಶು ಇಲಾಖೆಗೆ ಪೊಲೀಸ್ ಇಲಾಖೆಗೆ ಮತ್ತು ಆರೋಗ್ಯ ಇಲಾಖೆಗೆ ಈ ಮೂರಕ್ಕೂ ಸಿಬ್ಬಂದಿ ಮೇಲೆ ಆರ್ಥಿಕ ನಿರ್ಬಂಧ ಏನು ತೆಗೆದಿದ್ದಾರೆ, ಅದರಿಂದ 1993-94ಕ್ಕೆ 1900 ಹುದ್ದೆಗಳು ಏನು ಖಾಲಿ ಇವೆ ಅಷ್ಟನ್ನು ಬರುವ ವರ್ಷ ನಾವು ತುಂಬುತ್ತೇವೆ. ಆಗ ಸಮಸ್ಯೆ ಬಗೆಹರಿಯುತ್ತದೆ. ಮತ್ತು ಸಮಸ್ಯೆಲ್ಲಿ 1800 ಆಸ್ಪತ್ರೆಗಳು ಇವೆ. ಇನ್ನು 1200 ಆಸ್ಪತ್ರೆಗಳು ಬೇಕಾಗಿದೆ. ಆ 1200 ಆಸ್ಪತ್ರೆಗಳಲ್ಲಿ 1992-93ಕ್ಕೆ 200 ಆಸ್ಪತ್ರೆಗಳನ್ನು ಮಾಡುತ್ತಿದ್ದೇವೆ, 93-94ಕ್ಕೆ ಮತ್ತೆ 200 ಆಸ್ಪತ್ರೆಗಳನ್ನು ಮಾಡುತ್ತಿದ್ದೇವೆ. ಅದೇ ರೀತಿ ಏನು ಮಾಸ್ಟರ್ ಪ್ಲಾನ್ ಮಾಡಿದ್ದೇವೆ, ಆ ಪ್ರಕಾರ ಮುಂದೆ ಬರುವ 5 ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ಎಲ್ಲಾ ಕ್ಷೇತ್ರಗಳಿಗೂ ಮತ್ತು ಮಂಡಲಗಳಿಗೂ ಆಸ್ಪತ್ರೆಗಳನ್ನು ಕೊಡತಕ್ಕಂಥ ಯೋಜನೆ ಮಾಡಲಾಗಿದೆ.

ಪ್ರೌಢಶಾಲೆಗಳಲ್ಲಿ ಹಿಂದಿ ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆ

317 (1863): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):–

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಿಂದಿ ವಿಷಯವನ್ನು ಕಡ್ಡಾಯಗೊಳಿಸಿದ್ದು, ಹಿಂದಿ ಶಿಕ್ಷಕರೆ ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ;

ಆ) ಬಂದಿದ್ದರೆ, ಹಿಂದಿ ಶಿಕ್ಷಕರೇ ಇಲ್ಲದೆ ಹಿಂದಿ ವಿಷಯದಲ್ಲಿ ತೇರ್ಗಡೆಯಾಗುವುದಾದರೂ ಕಷ್ಟಕರವೆಂಬುದು ನಿಜವೆ ?

ಡಾ: ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ನಿಜ. 688 ಹಿಂದಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ.ಟಿ. ರಾಮಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೇ, 1993ನೇ ಏಪ್ರಿಲ್ ತಿಂಗಳಿನಲ್ಲಿ ಏನು ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಯುತ್ತದೆ ಆ ಪರೀಕ್ಷೆಯಲ್ಲಿ ಹಿಂದಿ ವಿಷಯದಲ್ಲಿ ಕಡ್ಡಾಯವಾಗಿ ತೇರ್ಗಡೆಯಾಗಬೇಕು ಎನ್ನುವ ನಿಯಮವನ್ನು ಸರ್ಕಾರ ರೂಪಿಸಿದೆ. ನಿಜ, ಒಕೆಂದರೆ ಹಿಂದಿ ನಮ್ಮ

ರಾಷ್ಟ್ರ ಭಾಷೆ, ಆ ಭಾಷೆಯನ್ನು ನಾವು ಕಲಿತುಕೊಳ್ಳಬೇಕಾದದ್ದು ನಮ್ಮ ಆದ್ಯಕರ್ತವ್ಯ. ಆದರೆ ಬಹುತೇಕ ಪ್ರೌಢಶಾಲೆಗಳಲ್ಲಿ ಹಿಂದಿ ಶಿಕ್ಷಕರು ಇಲ್ಲ. ಮಾಧ್ಯಮಿಕ ಶಾಲೆಗಳಲ್ಲೂ ಕೂಡ ಹಿಂದಿ ಶಿಕ್ಷಕರು ಇಲ್ಲದೆ ಮಕ್ಕಳಿಗೆ ಅಕ್ಷರ ಜ್ಞಾನವೇ ಇಲ್ಲ. ಅಂತಹ ಸಂದರ್ಭದಲ್ಲಿ ಬೋಧನೆಯನ್ನು ಮಾಡದೇ ಇರತಕ್ಕಂತಹ ವಿಷಯದಲ್ಲಿ ಪರೀಕ್ಷೆಯನ್ನು ನಡೆಸಿದರೆ ಮಕ್ಕಳ ಫಲಿತಾಂಶದ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲವೇ ಎನ್ನುವ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಡಾ: ಹೆಚ್.ಡಿ. ಲಮಾಣಿ:– ಮಾನ್ಯ ಅಧ್ಯಕ್ಷರೇ, ಎಸ್.ಎಸ್.ಎಲ್.ಸಿಯಲ್ಲಿ ಹಿಂದಿ ವಿಷಯವನ್ನು ಕಡ್ಡಾಯವಾಗಿ ಮಾಡಿದ ನಂತರ, 50 ಅಂಕಗಳಿಂದ 100 ಅಂಕಕ್ಕೆ ಜಾಸ್ತಿ ಮಾಡಿದನಂತರ ಶಾಲೆಗಳಿಗೆ ಅಧ್ಯಾಪಕರುಗಳನ್ನು ಸಹ ಕೊಡಬೇಕಾಗಿತ್ತು. ಆದರೆ ವಿದ್ಯಾರ್ಥಿಗಳಿಗೆ ತೊಂದರೆ ಆಗದ ಹಾಗೆ ನಾವು ಎಲ್ಲೆಲ್ಲಿ ಕನ್ನಡ ಶಾಲೆಯಲ್ಲಿ ಹಿಂದಿ ಪರೀಕ್ಷೆಗಳನ್ನು ಮಾಡಿರುವಂತಹ ಹಿಂದಿ ಅಧ್ಯಾಪಕರುಗಳು ಇದ್ದಾರೆ ಅವರಿಂದ ಪಾಠವನ್ನು ಈಗಾಗಲೇ ಹೇಳಿಸಿದ್ದೇವೆ.

ಶೈಕ್ಷಣಿಕ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಏನೂ ಅಂತಹ ತೊಂದರೆಯಾಗಿಲ್ಲ. ಮತ್ತು ಪರೀಕ್ಷೆಯಲ್ಲಿಯೂ ಸಹ ನಾವು ಅವರಿಗೆ ಸ್ವಲ್ಪ ವಿನಾಯಿತಿ ಕೊಡುವಂತಹ ವಿಷಯ ಇದೆ. ಆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಬಹುತೇಕ ಶಾಲೆಗಳಲ್ಲಿ ಶಿಕ್ಷಕರಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂಬ ವಿಚಾರವನ್ನು ಅವರೇ ಹೇಳಿದ್ದಾರೆ. ವಿದ್ಯಾರ್ಥಿಗಳು ಪಾಸ್ ಆಗಬೇಕಾದರೆ 35 ಅಂಕಗಳನ್ನು ತೆಗೆಯಲೇಬೇಕು. ಅದಕ್ಕೆ ರಿಯಾಯಿತಿಯಂತೂ ಕೊಟ್ಟಿಲ್ಲ. ಅದಕ್ಕೆ ರಿಯಾಯಿತಿಯನ್ನು ಕೊಡುತ್ತೀರೋ ಇಲ್ಲವೋ ? ಇಲ್ಲ ಎಂದರೆ ಹಿಂದಿ ವಿಷಯದಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕು ಎನ್ನುವಂತಹ ವಿಚಾರ ಸರ್ಕಾರದ ಮುಂದೆ ಏನು ಇದೆ ಅದನ್ನು ಕೈಬಿಡುತ್ತೀರಾ ? ಇದನ್ನು ಸ್ಪಷ್ಟವಾಗಿ ಹೇಳಬೇಕು. ಇಲ್ಲದಿದ್ದರೆ ಶಾಲೆಗಳ ಪರೀಕ್ಷೆ ಹತ್ತಿರ ಬರುತ್ತಿದೆ, ಇದರಿಂದ ಮಕ್ಕಳಿಗೆ ತೊಂದರೆಯಾಗಿ ಅವರ ಫಲಿತಾಂಶದ ಮೇಲೆ ಕೆಟ್ಟ ಪರಿಣಾಮವಾಗುತ್ತದೆ.

ಡಾ: ಹೆಚ್. ಡಿ. ಲಮಾಣಿ:– ಸನ್ಮಾನ್ಯ, ಅಧ್ಯಕ್ಷರೇ, ವಿದ್ಯಾರ್ಥಿಗಳಿಗೆ ತೊಂದರೆ ಆಗದ ಹಾಗೆ ವ್ಯವಸ್ಥೆ ಮಾಡುತ್ತೇವೆ ಎಂದು ನಾನು ಮೊದಲೇ ಹೇಳಿದೆ. ನಿಜವಾಗಿಯೂ ನಮಗೆ ಬಹಳಷ್ಟು ಹಿಂದಿ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು ಗೊತ್ತಿದೆ. ಸುಮಾರು 688 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅವುಗಳಿಗೆ ಮುಂದಿನ ವರ್ಷದಲ್ಲಿ ನಾವು ರಿಕ್ರೂಟ್‌ಮೆಂಟ್ ಮಾಡುತ್ತಿದ್ದೇವೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಏನೂ ತೊಂದರೆ ಆಗದ ಹಾಗೆ ನಾವು ಈಗಾಗಲೇ ವ್ಯವಸ್ಥೆ ಮಾಡಿದ್ದೇವೆ. ಎಲ್ಲೆಲ್ಲಿ ಹಿಂದಿ ಶಿಕ್ಷಕರು ಇದ್ದಾರೆ ಅವರನ್ನು ಸರ್ಕಾರಿ ಹೈಸ್ಕೂಲ್‌ಗಳಿಗೆ ಕಳುಹಿಸಿ ವಿದ್ಯಾರ್ಥಿಗಳಿಗೆ ಪಾಠ ಹೇಳಿಸುವ ವ್ಯವಸ್ಥೆ ಮಾಡಿದ್ದೇವೆ. ಮತ್ತು ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ತಮ್ಮ ಶಾಲೆಗೆ ಬೇಕಾದಂತಹ ಸಿಬ್ಬಂದಿಗಳನ್ನು ಅವರೇ ನೇಮಿಸಿಕೊಂಡಿರುತ್ತಾರೆ. ಅಲ್ಲಿ ಏನೂ ತೊಂದರೆಯಾಗುವುದಿಲ್ಲ. ತೊಂದರೆ ಬರುವುದು ಸರ್ಕಾರಿ ಶಾಲೆಗಳಲ್ಲಿ, ಪ್ರೈಮರಿ ಶಾಲೆಗಳಲ್ಲಿ ಇರುವಂತಹ ಅಧ್ಯಾಪಕರನ್ನು ನಾವು ಹೈಸ್ಕೂಲಿಗೆ ಕಳುಹಿಸಿ ಪಾಠ ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕಿವಿ, ಮೂಗು ಗಂಟಲು ಹಾಗೂ ನೇತ್ರ ತಜ್ಞರ ನಿಯೋಜನೆ

318 (1807): ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ):–